# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002**

ಸಂಖ್ಯೆ: BBMP/Addl.Dir/JD NORTH/LP/0144/2014-15 ದಿನಾಂಕ: 02-11-2015.

## ಶುಲ್ಕ ಪಾವತಿ ತಿಳುವಳಿಕೆ

ವಿಷಯ: ಆಸ್ತಿ ಸಂಖ್ಯೆ: 30, ಸರ್ವೆ ನಂ. 28/2, ಹೂಡಿ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು, ಇಲ್ಲಿ ವಸತಿ ಸಮುಚ್ಚಯ ಮತ್ತು ಕ್ಲಬ್‌ಹೌಸ್ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರವರು ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿದ ದಿನಾಂಕ: 28-10-2015.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಸ್ತಿ ಸಂಖ್ಯೆ: 30, ಸರ್ವೆ ನಂ. 28/2, ಹೂಡಿ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು, ಇಲ್ಲಿ ವಸತಿ ಸಮುಚ್ಚಯ ಮತ್ತು ಕ್ಲಬ್‌ಹೌಸ್ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಕೋರಿರುವ ಪ್ರಸ್ತಾವನೆಗೆ ಮಾನ್ಯ ಆಯುಕ್ತರವರು ಉಲ್ಲೇಖಿತ ದಿನಾಂಕದಂದು ಅನುಮೋದನೆ ನೀಡಿದ್ದು, ನಕ್ಷೆ ಮಂಜೂರಾತಿ ಸಂಬಂಧ ಲೈಸೆನ್ಸ್ ಫೀ ಮತ್ತು ಇತರೇ ಶುಲ್ಕಗಳ ಬಾಬ್ತು ಪಾವತಿಸಬೇಕಾದ ಮೊತ್ತವನ್ನು ಕೆಳಕಂಡಂತೆ ವಿವರಿಸಲಾಗಿದೆ.

ನಕ್ಷೆ ಮಂಜೂರಾತಿ ಸಂಬಂಧ ಶುಲ್ಕದ ಬಾಬ್ತು ರೂ. **2,86,58,000/-** (ರೂ ಎರಡು ಕೋಟಿ ಎಂಬತ್ತಾರು ಲಕ್ಷದ ಐವತ್ತೆಂಟು ಸಾವಿರ ಮಾತ್ರ), ಗಳನ್ನು ಡಿ.ಡಿ. ಮುಖಾಂತರ **Commissioner, BBMPA/C JDTP (North)** ರವರ ಹೆಸರಿನಲ್ಲಿ ಪಡೆದು ಸಲ್ಲಿಸುವುದು. ಕಾರ್ಮಿಕ ಕಲ್ಯಾಣ ನಿಧಿಯ ಸುಂಕದ ಸಂಬಂಧ ಪ್ರತ್ಯೇಕವಾಗಿ ರೂ. **1,82,55,700/-** (ರೂ ಒಂದು ಕೋಟಿ ಎಂಭತ್ತೆರಡು ಲಕ್ಷದ ಐವತ್ತೈದು ಸಾವಿರದ ಏಳುನೂರು ಮಾತ್ರ) ಗಳನ್ನು **ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ (Karnataka State Building & Other Construction Workers Welfare Board)**, ಬೆಂಗಳೂರು ರವರ ಹೆಸರಿನಲ್ಲಿ ಡಿ.ಡಿ. ಪಡೆದು ಸಲ್ಲಿಸುವುದು.

ವಾಹನ ನಿಲುಗಡೆಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸುವುದಾಗಿಯೂ ಒಪ್ಪಿದ ಪ್ರಮಾಣಪತ್ರ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಬೀಳಬಹುದಾದ ಅನುಪಯುಕ್ತ ವಸ್ತುಗಳನ್ನು (Debris material) ಹೊರಕ್ಕೆ ಸಾಗಿಸಲು ತಗಲುವ ವೆಚ್ಚವನ್ನು ಭರಿಸುವುದಾಗಿಯೂ ಒಪ್ಪಿದ ಪ್ರಮಾಣಪತ್ರವನ್ನು ರೂ. 200 ರ ಪ್ರತ್ಯೇಕ ಛಾಪಾ ಕಾಗದದಲ್ಲಿ ಸಲ್ಲಿಸುವುದು

ಶುಲ್ಕ ಲೆಕ್ಕಾಚಾರದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವಿವರ | ಶುಲ್ಕ ರೂ. |
|---|---|---|
| 1 | ನೆಲ ಬಾಡಿಗೆ | 53,63,883–00 |
| 2 | ಉತ್ತಮತೆ ಶುಲ್ಕ: 1. ಕಟ್ಟಡಕ್ಕಾಗಿ | 2,38,395–00 |
| 3 | ಭದ್ರತಾ ಠೇವಣಿ | 1,19,19,739–00 |
| 4 | ಲೈಸೆನ್ಸ್ ಶುಲ್ಕ | 1,09,01,848–00 |
| 5 | ನಕ್ಷೆ ಪ್ರತಿಗಳ ಶುಲ್ಕ | 34,400–00 |
| 6 | ಆವರಣಗೋಡೆ ಶುಲ್ಕ | 15,000–00 |
| 7 | ಶೇ 1 ರಷ್ಟು ಕಾರ್ಮಿಕ ಕಲ್ಯಾಣ ನಿಧಿಯಿಂದ ಪಾಲಿಕೆಗೆ ಸಂದಾಯವಾಗಬೇಕಾದ ಸೇವಾ ಶುಲ್ಕ | 1,84,400–00 |
| | ಒಟ್ಟು | **2,86,57,665–00** |
| | **Say Rs.** | **2,86,58,000–00** |

ಮೇಲೆ ತಿಳಿಸಿರುವ ಶುಲ್ಕಗಳ ಬಾಬ್ತುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ತೆಗೆದ ಡಿ.ಡಿ, ಮುಚ್ಚಳಿಕೆ ಪತ್ರ,, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶದ ಷರತ್ತು ಸಂಖ್ಯೆ 15 ರಲ್ಲಿ ಸೂಚಿಸಿರುವಂತೆ ಪ್ರಶ್ನಿತ ಜಮೀನು ಕೈಗಾರಿಕ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವುದರಿಂದ ವಾಸದ ಉದ್ದೇಶಕ್ಕೆ ಪರಿಷ್ಕೃತ ಭೂ ಪರಿವರ್ತನಾ ಆದೇಶ ಪಡೆದು ಸಲ್ಲಿಸುವ ಹಾಗೂ ಕರಡು ನಕ್ಷೆಗಳನ್ವಯ ತಯಾರಿಸಲಾದ ಶುದ್ಧ ನಕ್ಷೆ ಪ್ರತಿಗಳನ್ನು Soft copy ಯೊಂದಿಗೆ ಈ ಕಛೇರಿಗೆ ಈ ಪತ್ರ ತಲುಪಿದ 45 ದಿನಗಳೊಳಗೆ ಪಾವತಿಸಲು ತಿಳಿಸಲಾಗಿದೆ. ನಂತರ ನಕ್ಷೆ ಮಂಜೂರಾತಿ ನೀಡುವ ಸಂಬಂಧ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

02/11/15

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

02/11/15 02/11/15

ರವರಿಗೆ,
ಮೆ: ಯುನೈಟೆಡ್ ಆಕ್ಸಿಜೆನ್ ಕಂ ಪ್ರೈ ಲಿ.
# 10, ಮ್ಯೂಸಿಯಂ ರಸ್ತೆ, ಪ್ರೈಡ್ ಎಲೈಟ್,
4ನೇ ಮಹಡಿ,
ಬೆಂಗಳೂರು – 560 001